ಅಸಲು ದಾವಾಃ-242/2021 ಡಿ.ಡಬ್ಲ್ಯೂಃ- 1

ದಿನಾಂಕಃ 06.11.2025 ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ- ವಾದಿಗಳ ಪರ ಶ್ರೀ.ಜಿಎಸ್‌ಆರ್ ವಕೀಲರಿಂದ

ಎಲ್ಲಿಯ ತನಕ ಓದಿದ್ದೇನೆ ಎಂದರೆ ಓದಿಲ್ಲ. ಕುಳಗಟ್ಟೆ ಶಾಲೆಯಲ್ಲಿ ನಾನು 3 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ ಎಂದರೆ ಗೊತ್ತಿಲ್ಲ. ಕ್ರಯಪತ್ರದಲ್ಲಿ ಮೈನರ್ ಗಾರ್ಡಿಯನ್ ಎಂದು ಇರುವುದನ್ನು ಪಹಣಿಯಲ್ಲಿ ಯಾವಾಗ ತೆಗೆಸಿರುತ್ತೇನೆ ಎಂದರೆ ಸಾಕ್ಷಿಯು ಅವರೇ ತೆಗೆದಿರುತ್ತಾರೆ ಎಂದು ನುಡಿಯುತ್ತಾರೆ. 2013-14 ನೇ ಸಾಲಿನಲ್ಲಿ ಮೈನರ್ ಗಾರ್ಡಿಯನ್ ಎಂದು ಇರುವುದನ್ನು ತೆಗೆದು ನನ್ನ ಹೆಸರಿಗೆ ಎಂ.ಆರ್.ನಂ.ಹೆಚ್-14/2013-14 ರಂತೆ ಮ್ಯುಟೇಷನ್ ಆಗಿರುತ್ತದೆ ಎಂದರೆ ಸರಿ ಸಾಕ್ಷಿಯು ಮುಂದುವರೆದು ಪಾರಿಕತ್ತು ಮಾಡಿಕೊಡಿ ಎಂದು ವಾದಿಗಳೇ ತೆಗೆಸಿರುತ್ತಾರೆ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ 10-12 ವರ್ಷದ ಹುಡುಗರು ಆಟವಾಡುತ್ತಾ ಶಾಲೆಗೆ ಹೋಗುವ ವಯಸ್ಸು ಎಂದರೆ ಸರಿ. 10-12 ವರ್ಷದ ಹುಡುಗರಿಗೆ ಯಾವುದೇ ದುಡಿಮೆ ಇರುವುದನ್ನು ಎಂದರೆ ಸಾಕ್ಷಿಯು ಆ ವಯಸ್ಸಿನಲ್ಲಿ ನಾನು ಸಂಬಳಕಿದ್ದೆ ಎಂದು ನುಡಿಯುತ್ತಾರೆ. ಯಾವ ಮನೆಯಲ್ಲಿ ಸಂಬಳಕ್ಕಿದ್ದೆ ಎಂದರೆ ಸಾಕ್ಷಿಯು ಬಾಲಾಜಿ ತಿಮ್ಮಪ್ಪ, ಹಟ್ಟಿ ನರಸಪ್ಪರವರ ಮನೆಗಳಲ್ಲಿ ಸಂಬಳಕ್ಕಿದ್ದೆ ಎಂದು ನುಡಿಯುತ್ತಾರೆ.

14 ವರ್ಷದ ಕೆಳಗಿನ ವಯಸ್ಕರು ಸಂಬಳಕ್ಕಿದ್ದರೆ ಕಾನೂನು ಅಪರಾಧವಾಗುತ್ತದೆ ಎಂದರೆ ನಾವು ಹಳ್ಳಿ ಜನ ನಮಗೆ ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ. ನಾನು ಮತ್ತು ವಾದಿಗಳು ಯಾವಾಗ ಬೇರೆ ಬೇರೆಯಾಗಿರುತ್ತೇವೆ ಎಂದರೆ ಸಾಕ್ಷಿ ಸುಮಾರು 10 ವರ್ಷಗಳ ಹಿಂದೆ ಎಂದು ನುಡಿಯುತ್ತಾರೆ. ದಾವಾ 2 ಸ್ವತ್ತುಗಳಲ್ಲಿಯೂ ಸಹ ನಾನು ಮತ್ತು ವಾದಿಗಳು ಉಳುಮೆ ಮಾಡುತ್ತಿದ್ದೆವು ಎಂದು ನನ್ನ ಮುಖ್ಯವಿಚಾರಣೆಯಲ್ಲಿ ಬರೆಸಿರುತ್ತೇವೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಮತ್ತು 2 ನೇ ಪ್ರತಿವಾದಿಯ ಗಂಡ ಇವರ ಸ್ವಯಾರ್ಜಿತ ಆಸ್ತಿಯಾದ ಸರ್ವೆ ನಂ.46/2 ರಲ್ಲಿ 2 ಎಕರೆ 28 ಗುಂಟೆ ಜಮೀನಿನಲ್ಲಿ ವಾದಿ ಚಂದ್ರಮ್ಮ ಇವರು 1 ಎಕರೆ, ನಾನು 1 ಎಕರೆ ಮತ್ತು 2 ನೇ ಪ್ರತಿವಾದಿ ಶಿವಪ್ಪ 28

ಗುಂಟೆ ಸಾಗುವಳಿ ಮಾಡುತ್ತಿರುತ್ತಾರೆ ಎಂದು ನನ್ನ ಪ್ರತಿವಾದ ಪತ್ರದ 4 ನೇ ಪ್ಯಾರಾದಲ್ಲಿ ಬರೆಸಿರುತ್ತೇನೆ ಎಂದರೆ ಸರಿ. ಅದೇ ರೀತಿ ದಾವಾ ಐಟಂ ನಂ.1 ರಲ್ಲಿಯೂ ಸಹ ನಾವೆಲ್ಲರೂ ಸಾಗುವಳಿ ಮಾಡುತ್ತಿದ್ದೆವು ಎಂದರೆ ಸಾಕ್ಷಿಯು ನಾನು ಮತ್ತು ವಾದಿಗಳು ಸಾಕ್ಷ್ಯ ನುಡಿಯುತ್ತಿದ್ದೇವೆ ಎಂದು ನುಡಿಯುತ್ತಾರೆ.

ವಿಭಾಗ ಮಾಡಿಕೊಡಿ ಎಂದು ವಾದಿಗಳು ನನ್ನನ್ನು ದಿಃ 21.08.2021 ರಂದು ಕೇಳಿಕೊಂಡಿರುತ್ತಾರೆ ಎಂದರೆ ಸರಿ ಮುಂದುವರೆದು ಸಾಕ್ಷಿಯು ನನ್ನ ಸ್ವಯಾರ್ಜಿತ ಆಸ್ತಿಯನ್ನು ಬಿಟ್ಟು ಉಳಿದ ಆಸ್ತಿಯಲ್ಲಿ ವಿಭಾಗ ಮಾಡಿಕೊಳ್ಳೋಣ ಎಂದು ಹೇಳಿರುತ್ತೇನೆ ಎಂದು ನುಡಿಯುತ್ತಾರೆ. ಬಾಲಾಜಿ ತಿಮ್ಮಪ್ಪ, ಹಟ್ಟಿ ನರಸಪ್ಪರವರನ್ನು ನ್ಯಾಯಾಲಯಕ್ಕೆ ಕರೆಸಿ ಸಾಕ್ಷ್ಯ ವಿಚಾರಣೆ ಮಾಡಿಸಲು ನನಗೆ ತೊಂದರೆ ಇಲ್ಲ ಎಂದರೆ ಸರಿ. ದಾವಾ ಐಟಂ ನಂ.2 ನ್ನು ಖರೀದಿ ಮಾಡುವ ಕಾಲಕ್ಕೆ ನನಗೆ ಯಾವುದೇ ದುಡಿಮೆ ಇಲ್ಲದೇ ಇದ್ದರೂ ಸಹ ಸುಳ್ಳು ಹೇಳಿ ವಾದಿಗಳಿಗೆ ಹಿಸ್ಸೆ ಕೊಡಬೇಕಾಗುತ್ತದೆ ಎಂದು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ